ಪಿಡಬ್ಲೂ - 1

**<u>ದಿಃ 15.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ-</u>** ಶ್ರೀ.ಹೆಚ್. ಎಸ್. ವಿ. ನ್ಯಾಯವಾದಿಗಳಿಂದಃ-

ದಾವ ಸ್ವತ್ತು ನನ್ನ ತಾಯಿಯ ಹೆಸರಿನಿಂದ ನನ್ನ ಹೆಸರಿಗೆ ಬಂದಿರುತ್ತದೆ. ನನ್ನ ತಾಯಿಯ ತಂದೆಯ ಹೆಸರು ಐಗೂರು ರಂಗಪ್ಪ ನ ಮಗ ಬಸಪ್ಪ. ಸದರಿಯವರಿಗೆ ನನ್ನ ತಾಯಿ ಕೆಂಚವ್ವ ಮೊದಲ ಮಗಳಾಗಿರುತ್ತಾಳೆ ಎಂದರೆ ಸರಿ. ಸದರಿ ನಮ್ಮ ಅಜ್ಜ ಮತ್ತು ನಮ್ಮ ತಾಯಿ ಮತ್ತು ಅವರ ಅಕ್ಕ ತಂಗಿಯರು ಅವರ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡ ಸಂಬಂದ ನಿ.ಪಿ.30 ರಂತೆ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಬಿಳಿಚೋಡಿನಲ್ಲಿರುವ ಸರ್ವೆ ನಂಬರಿನ 4 ಎಕರೆ ಜಮೀನಿಗೆ ಸಂಬಂದಿಸಿದಂತೆ ಸದರಿ ದಾವೆಯನ್ನು ಹಾಕಿರುತ್ತೇನೆ. ಈ ಮೇಲೆ ಹೇಳಿದ ನಿ.ಪಿ.30 ರಂತೆ ಪಾಲು ವಿಭಾಗದಲ್ಲಿ ನಮ್ಮ ತಾಯಿಗೆ ಬಂದ ಸ್ವತ್ತು ನಂತರ ನನ್ನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನಿ.ಪಿ. 30 ರ ಪಾಲು ವಿಭಾಗ ಪತ್ರದಲ್ಲಿ ನನ್ನ ತಾಯಿ ಕೆಂಚವ್ವನಿಗೆ 3 ಎಕರೆ 20 ಗುಂಟೆ ಜಮೀನು ಮಾತ್ರ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು 4 ಎಕರೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಯಾವ ರೀತಿ ಆಸ್ತಿ ಬಂದಿರುತ್ತದೆ ನನಗೆ ಸರಿಯಾಗಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ನನ್ನ 2 ಜನ ಗಂಡು ಮಕ್ಕಳು 3-4 ವರ್ಷಗಳ ಹಿಂದೆ ತಲಾ 2 ಎಕರೆಯಂತೆ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ಬಿಳಿಚೋಡು ಗ್ರಾಮದ ಸರ್ವೆ ನಂಃ80/1 ರ 4 ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂದಿಸಿದಂತೆ ಸದರಿ ದಾವೆಯನ್ನು ಹಾಕಿರುತ್ತೇನೆ. ಸಾಕ್ಷಿಗೆ ನಿ.ಪಿ. 1 ರಲ್ಲಿರುವ ದಾವ ಸ್ವತ್ತಿನ ಚಕ್ಕುಬಂದಿಯನ್ನು ಓದಿ ಹೇಳಲಾಗಿ ಸರಿಯಿರುತ್ತದೆ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ದಾವ ಸ್ವತ್ತಿನ ಸರ್ವೆ ನಂಬರ್ ನಲ್ಲಿ ನನ್ನ ತಾಯಿಯ ಪಾಲಿಗೆ 4 ಎಕರೆ 10 ಗುಂಟೆ ಎಕರೆ ಜಮೀನು ಬಂದಿರುವುದಿಲ್ಲ, ಕೇವಲ 3 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ. 1 ರಲ್ಲಿರುವ ಮತ್ತು ದಾವ ಷೆಡ್ಯೂಲ್ ನಲ್ಲಿರುವ ದಾವ ಸ್ವತ್ತಿನ ಚಕ್ಕುಬಂದಿ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಚಕ್ಕುಬಂದಿ ತಪ್ಪಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದ ಪತ್ರದೊಂದಿಗೆ ಹಾಜರುಪಡಿಸಿರುವ ಕಚ್ಚಾ ನಕಾಶೆಯು ನಾನು ಹೇಳಿದಂತೆ ನಮ್ಮ ನ್ಯಾಯಾವಾದಿಗಳು ತಯಾರಿಸಿ ಹಾಕಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಒತ್ತುವರಿ

ಸಂಬಂದ 3/4 ಭಾಗ ಎಂದು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ದಾವ ಸ್ವತ್ತಿನ ಷೆಡ್ಯೂಲ್ ನಲ್ಲಿ ತೋರಿಸಿರುವ ಒತ್ತುವರಿ ಸಂಬಂದ ಸರ್ವೆಯರ್ ನಿಂದ ಅಳತೆ ಮಾಡಿಸಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಮುಂದುವರಿದು 1 ನೇ ಪ್ರತಿವಾದಿಯು ದಾವ ಸ್ವತ್ತಿನ ಪಶ್ಚಿಮ ಭಾಗದಲ್ಲಿ 18 X 20 ಅಡಿ ವಿಸ್ತೀರ್ಣದ ಜಮೀನನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದು, ಅದರ ಪಕ್ಕದಲ್ಲಿ ಮನೆಯ ಅಡಿಪಾಯವನ್ನು ಹಾಕಿರುತ್ತಾನೆ. ಈ ಮೇಲೆ ಹೇಳಿದ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ನಿ.ಪಿ. 10 ರಿಂದ 14-ಛಾಯಚಿತ್ರಗಳು ಮತ್ತು ಸಿ ಡಿ ಯು ಸದರಿ ದಾವ ಸ್ವತ್ತಿಗೆ ಸಂಬಂದಿಸಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕಂದಾಯ ಪಾವತಿ ರಶೀದಿಗಳು ನನ್ನ ತಾಯಿಗೆ ಸೇರಿದ 3 ಎಕರೆ 20 ಗುಂಟೆ ಜಮೀನಿಗೆ ಸೇರಿದ್ದಾಗಿರುತ್ತದೆ ಎಂದರೆ, ಸಾಕ್ಷಿಯು ದಾವ ಸ್ವತ್ತಿಗೆ ಸಂಬಂದಿಸಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ದಾವ ಸ್ವತ್ತಿನ ವಿಸ್ತೀರ್ಣ ಮತ್ತು ಚಕ್ಕುಬಂದಿ ಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ತಪ್ಪು ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೇರಿದ ಯಾವುದೇ ಮನೆ ಅಥವಾ ಅಡಿಪಾಯ ದಾವ ಸ್ವತ್ತಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವ ಸ್ವತ್ತನ್ನು ಒತ್ತುವರಿ ಮಾಡದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು